# ಗುರುವಂದನಾ

ಸ್ವಾಮಿ ಸುಂದಾನಂದ

*'ಶಿವಪಥವರಿವಡೆ ಗುರುಪಥ ಮೊದಲು' ಎಂಬಂತೆ ಸಾಧನೆಯ ಮಾರ್ಗದಲ್ಲಿ ನಮ್ಮ ದಾರಿ ತೋರಿಸಿ ನಡೆಸುವವನು ಗುರು. ಯಾವುದೇ ಆಧ್ಯಾತ್ಮಿಕ ಅಥವಾ ಲೌಕಿಕ ಸಾಧನೆಯಲ್ಲಿ ಗುರುವಿನ ಸ್ಥಾನ ಅನನ್ಯವಾದುದು. ಅಂತಹ ಗುರುವಿಗೆ ನಮ್ಮ ವಿಶೇಷ ನಮನಗಳನ್ನು ಸಲ್ಲಿಸುವ ದಿನ ಗುರುಪೂರ್ಣಿಮೆ. ಗುರುವಿನ ಮಹತ್ತ್ವವನ್ನು ಸರಳವಾದ ಭಾಷೆಯಲ್ಲಿ ಮನಮುಟ್ಟುವಂತೆ ತಿಳಿಸಿರುವ ಈ ಬರಹ ಹಿರಿಯ ಸಂನ್ಯಾಸಿಗಳೂ ಹಾಗೂ ದೀರ್ಘಕಾಲ ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರೂ ಆಗಿದ್ದ ದಿವಂಗತ ಸ್ವಾಮಿ ಸುಂದಾನಂದರು ಭಕ್ತಾದಿಗಳಿಗೆ ಹೇಳಿದ ಹಿತನುಡಿಗಳ ಸಂಗ್ರಹವಾಗಿದೆ.*

**ಗು**ರುಪೂರ್ಣಿಮೆ ಎಂದರೆ ಒಂದು ರೀತಿಯಲ್ಲಿ Thanks giving—ಇದು ಗುರುವಂದನಾ ಕಾರ್ಯಕ್ರಮ. ಈ ಗುರುವಂದನೆ ಕೇವಲ ದೀಕ್ಷೆ ಕೊಟ್ಟ ಗುರುವಿಗೆ ಮಾತ್ರವಲ್ಲ. ಜೀವನದಲ್ಲಿ ನಮಗೆ ಎಷ್ಟೋ ಗುರುಗಳು ಜ್ಞಾನವನ್ನು ಕೊಟ್ಟಿದ್ದಾರೆ. ನಮಗೆ ಒಳ್ಳೆಯ ಮಾತನ್ನು ಹೇಳಿದವರು, ಬೇರೆ ಬೇರೆ ವಿಷಯಗಳ ಜ್ಞಾನವನ್ನು ಕೊಟ್ಟವರು ಅನೇಕರಿದ್ದಾರೆ. ಹೀಗೆ ನಮಗೆ ನೂರಾರು ಜನ ಗುರುಗಳು ಇದ್ದಾರೆ. ಇಂದು ಅವರೆಲ್ಲರನ್ನು ನೆನಪಿಸಿಕೊಳ್ಳುವ ದಿನವೆಂದರೆ ಸಮಂಜಸವಾಗುತ್ತದೆ. ಜೀವನದಲ್ಲಿ ಗುರುವಿಲ್ಲದೆ ಯಾವ ವಿಷಯವೂ, ವಿದ್ಯೆಯೂ ಬರಲಾರದು. ನಾವು ಬೇರೆಯವರಿಂದ ಏನನ್ನು ಪಡೆದಿದ್ದೇವೆಯೋ ಅದನ್ನೆಲ್ಲ ಅವರು ನಮಗೆ ಪ್ರೇಮದಿಂದ ಧಾರೆಯೆರೆದು ಕೊಟ್ಟಿದ್ದಾರೆ. ಇಂದು ನಾವು ಅವರೆಲ್ಲರನ್ನೂ ನೆನೆದುಕೊಳ್ಳುವ ಗುರುಪೂರ್ಣಿಮೆಯ ದಿನ.

> **ಕದಿಯುವುದನ್ನು ಕಲಿಯಬೇಕಾದರೂ ಒಬ್ಬನಿಗೆ ಗುರು ಬೇಕು. ಮತ್ತೆ ಈ ಬ್ರಹ್ಮವಿದ್ಯೆಯನ್ನು ಪಡೆಯಲು ಗುರು ಬೇಡವೇ?**
>
> *—ಸ್ವಾಮಿ ಬ್ರಹ್ಮಾನಂದ.*

ಈ ದಿನವನ್ನು ವ್ಯಾಸಪೂರ್ಣಿಮೆ ಎಂದೂ ಕರೆಯುತ್ತಾರೆ. ವ್ಯಾಸರೆಂದರೆ ಅನಾದಿಕಾಲದಿಂದ ಬಂದ ಜ್ಞಾನಭಂಡಾರವನ್ನು ವೇದಗಳನ್ನಾಗಿ ವಿಂಗಡಿಸಿದವರು, ಬ್ರಹ್ಮಸೂತ್ರಗಳನ್ನು ರಚಿಸಿದವರು. ಮಹಾಭಾರತ ಪುರಾಣಾದಿಗಳನ್ನೆಲ್ಲ ವ್ಯಾಸರೇ ಬರೆದರು. ಈ ವಿಶಾಲವಾದ ಜ್ಞಾನ ಬಂದದ್ದು ವ್ಯಾಸರಿಂದಲೇ. ಆಧ್ಯಾತ್ಮಿಕ ಜ್ಞಾನಕ್ಕಂತೂ ವ್ಯಾಸಮಹರ್ಷಿಗಳೆ ಕಾರಣರೆಂದರೆ ತಪ್ಪಾಗದು. ವ್ಯಾಸರೆಂದರೆ ನಮ್ಮೆಲ್ಲರ ಗುರುಗಳ ಪ್ರತೀಕ ಮೂರ್ತಿ. ಆದ್ದರಿಂದಲೇ ಎಲ್ಲ ಅಧ್ಯಾತ್ಮ ಜೀವಿಗಳಿಗೂ ಗುರುಪೂರ್ಣಿಮೆ ಅಥವಾ ವ್ಯಾಸಪೂರ್ಣಿಮೆಯು ಗುರುವಂದನಾ ದಿನ.

ಗುರುವು ನಮಗೆಲ್ಲರಿಗೂ ಬೇಕೇ ಬೇಕು. ವಿಷಯವು ಯಾವುದೇ ಇರಬಹುದು. ಶಾಲಾವಿಷಯಗಳಾಗಿರಬಹುದು ಅಥವಾ ಬೇರೆ ಯಾವುದೇ ಹೊಸ ವಿಷಯವಾಗಿರಬಹುದು. ಅದನ್ನು ಕಲಿಯುವಾಗ ಒಂದಲ್ಲ ಒಂದು ರೀತಿಯಲ್ಲಿ ಒಬ್ಬ ಗುರುವನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದ್ದರಿಂದ ಎಲ್ಲಕ್ಕೂ ಗುರುವು ಬೇಕೇಬೇಕು. ಆದರೆ ಬೇರೆ ಎಲ್ಲ ವಿಷಯಗಳ ಗುರುಗಳಿಗಿಂತಲೂ ಆಧ್ಯಾತ್ಮಿಕ ಗುರು ಮಾತ್ರ ವಿಶೇಷ ಹಾಗೂ ಅತ್ಯಗತ್ಯ ಕೂಡಾ!

ಭೌತಿಕ ವಿಷಯಗಳು ಎಲ್ಲ ಕಡೆಗಳಲ್ಲೂ ಒಂದೇ ತೆರನಿರುತ್ತವೆ. ಉದಾಹರಣೆಗೆ ಗಣಿತ. ಗಣಿತ ಎಲ್ಲರಿಗೂ ಒಂದೇ. ಅದನ್ನು ಕಲಿತವರು ಯಾರು ಯಾರಿಗೆ ಬೇಕಾದರೂ ಹೇಳಿಕೊಡಬಹುದು. ಸ್ಥಾನ ಅಥವಾ ವ್ಯಕ್ತಿಭೇದದಿಂದಾಗಿ ಅದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಆದರೆ ಆಧ್ಯಾತ್ಮಿಕ ಜ್ಞಾನದ ವಿಷಯವೇ ಬೇರೆ. ಅಧ್ಯಾತ್ಮಜೀವನವನ್ನು ಕಲಿಸುವ ಗುರುವಿನ ಕೆಲಸ ಅಷ್ಟು ಸುಲಭವಲ್ಲ. ಕಲಿಯುವವರು ಒಬ್ಬೊಬ್ಬರೂ ಒಂದೊಂದು ತೆರನಿರುತ್ತಾರೆ. ಪ್ರತಿಯೊಬ್ಬರಲ್ಲೂ ಬುದ್ಧಿ, ಸಂಸ್ಕಾರ, ಮನಸ್ಸಿನ ಶಕ್ತಿ, ದೇಹದ ಶಕ್ತಿ, ಒಳಗು-ಹೊರಗು, ಭಾವಗಳು ಎಲ್ಲವೂ ಭಿನ್ನ ಭಿನ್ನ. ಒಬ್ಬನಂತೆಯೇ ಮತ್ತೊಬ್ಬ ಇಲ್ಲವೇ ಇಲ್ಲ. ಮೇಲ್ನೋಟಕ್ಕೆ ಎಲ್ಲರೂ ಒಂದೇ ರೀತಿಯಿದ್ದರೂ ಪ್ರತಿಯೊಬ್ಬನೂ ಭಿನ್ನ. ಅಷ್ಟೇ ಅಲ್ಲ, ಮಾನವ ಕ್ಷಣಕ್ಷಣಕ್ಕೂ ಒಳಗೂ ಹೊರಗೂ ಬೆಳೆಯುತ್ತಾ ಬದಲಾವಣೆಯಾಗುತ್ತ ಇರುತ್ತಾನೆ. ಗಣಿತಗಳಂಥ ಪಾಠವಿಷಯಗಳು ಬುದ್ಧಿಮಟ್ಟದಲ್ಲಿ ಮಾತ್ರ ಕೆಲಸ ಮಾಡುತ್ತವೆ. ಆದರೆ ಜೀವನವನ್ನೇ ಪರಿವರ್ತಿಸುವ ಅಧ್ಯಾತ್ಮವಿದ್ಯೆಯನ್ನು ಅವರವರಿಗೆ ಯೋಗ್ಯವಾದ ರೀತಿಯಲ್ಲಿ ಹೇಳಿಕೊಟ್ಟು, ದಾರಿತೋರಿಸುವುದು ಸಾಮಾನ್ಯ ಗುರುವಿನಿಂದಾಗುವ ಕೆಲಸವಲ್ಲ!

ಪ್ರಾಪಂಚಿಕ ಬೇಕುಗಳೆಲ್ಲ ತಣಿದಾಗ ನಮ್ಮೊಳಗಿನ ಶಾಶ್ವತ ಶಾಂತಿಯ ಆಸೆ ನಮ್ಮನ್ನು ಕಾಡಲಾರಂಭಿಸುತ್ತದೆ. ಶಾಂತಿಗಾಗಿ ಮನುಷ್ಯನ ಈ ತೆರನಾದ ಹೋರಾಟವನ್ನು ಪಾಶ್ಚಾತ್ಯ ತತ್ತ್ವಜ್ಞಾನಿಯೊಬ್ಬ ಹೀಗೆ ವರ್ಣಿಸುತ್ತಾನೆ: ನದಿಯೊಂದು ತನ್ನ ಉಗಮಸ್ಥಾನದಿಂದ ಸಮುದ್ರದೆಡೆಗೆ ಪ್ರವಹಿಸುತ್ತದೆ. ಆದರೆ ಆ ನದಿಯ ಉಗಮಸ್ಥಾನ ನಮ್ಮ ಜೀವನದ ಗುರಿ. ನದಿಯ ಪ್ರವಾಹವು

ಸೇರುವ ಸಮುದ್ರ ನಮ್ಮ ಅಧೋಗತಿ. ನಾವೆಲ್ಲರೂ ಆ ನದಿಯಲ್ಲಿ ನಾವಿಕರು. ನಾವು ಉತ್ತಮರಾಗಲು ಅಥವಾ ಶಾಂತಿಯನ್ನು ಪಡೆಯಲು ನದಿಯ ಪ್ರವಾಹದ ವಿರುದ್ಧ ದಿಕ್ಕಿಗೆ ನಮ್ಮ ಪ್ರಯಾಣವನ್ನು ನಡೆಸಬೇಕಾಗಿದೆ. ನಮ್ಮಲ್ಲಿರುವ ಸದ್ಗುಣ, ಸದ್ಭಾವನೆಗಳೆಂಬ ಹರಿಗೋಲಿನಿಂದ ಹುಟ್ಟು ಹಾಕಿಕೊಂಡು, ಅವುಗಳ ಬಲದಿಂದ ನಾವು ಪ್ರವಾಹದ ವಿರುದ್ಧ ಸಾಗಬೇಕಾಗಿದೆ. ನಮಗೆಲ್ಲರಿಗೂ ಒಳ್ಳೆಯವರಾಗಬೇಕೆಂಬ ಆಸೆ ಇದ್ದೇ ಇದೆ. ಅಂದರೆ ನದಿಯ ಉಗಮಸ್ಥಾನಕ್ಕೆ ಹೋಗುವ ಆಸೆ ಇದೆ. ಆದರೆ ನದಿಯ ಪ್ರವಾಹ ಮಾತ್ರ ಯಾವಾಗಲೂ ವಿರುದ್ಧ ದಿಕ್ಕಿಗೆ ನಮ್ಮನ್ನು ದೂಡುತ್ತ ಇರುತ್ತದೆ. ನಾವು ನಿಂತಲ್ಲೇ ನಿಲ್ಲುವುದಕ್ಕಾದರೂ ಬಹಳ ಪ್ರಯತ್ನ ಅಗತ್ಯ. ಹುಟ್ಟು ಹಾಕುತ್ತಲೇ ಇರಬೇಕು. ನಿಂತಲ್ಲೇ ನಿಲ್ಲಲೂ ಇಷ್ಟು ಕಷ್ಟವಾದರೆ ಇನ್ನು ಆ ನದಿಯ ಮೂಲಕ್ಕೆ ಹೋಗಲು ನಮಗೆ ಇನ್ನೆಷ್ಟು ಪ್ರಯತ್ನ ಸಾಹಸ ಬೇಡ! ಆದರೂ ನಮಗೆಲ್ಲ ಗೊತ್ತು ಪ್ರವಾಹದ ವಿರುದ್ಧ ಸಾಗಿದರೇನೇ ನಮ್ಮ ಪ್ರಗತಿ ಸಾಧ್ಯ ಎಂದು. ಅರಿತೋ ಅರಿಯದೆಯೋ ಪ್ರತಿಕ್ಷಣವೂ ನಾವು ನದಿಯ ಉಗಮಸ್ಥಾನದೆಡೆಗೆ ಅಥವಾ ಭಗವಂತನೆಡೆಗೆ ಸಾಗುತ್ತಿದ್ದೇವೆ.

ಹಾಗಾದರೆ ನಮಗೆಲ್ಲರಿಗೂ ಬೇಕಾದ ಈ ಭಗವಂತ ಯಾರು? ಆತನನ್ನು ನೋಡಿದವರು ಆತನ ಬಗ್ಗೆ ನಮಗೆ ಹೇಳಿದರೆ ಹಾಗೂ ಅವರು ಹೇಳಿದ್ದರಲ್ಲಿ ನಮಗೆ ನಂಬುಗೆ ಉಂಟಾದರೆ ಅದೇ ನಮ್ಮ ಭಾಗ್ಯ. ಹೀಗಾಗುವುದು ಬಹಳ ವಿರಳ. ಆದರೆ ನಾವು ಹತಾಶರಾಗಬೇಕಿಲ್ಲ. ಭಗವಂತನು ಯಾರೆಂದು ವಿವರಿಸುವ ಆ ಪ್ರಾಚೀನ ಗುರುಗಳ ವಾಗ್ಝರಿಯನ್ನು ಇಂದೂ ಕೂಡ ನಾವು ಕೇಳಬಹುದು. ಅವುಗಳೇ ವೇದಶಾಸ್ತ್ರಗಳು, ಉಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತೆ ಇತ್ಯಾದಿ ಇತ್ಯಾದಿ. ಆದರೆ ಇವುಗಳನ್ನು ಆಧಾರವಾಗಿಟ್ಟುಕೊಂಡು ಭಗವಂತನೆಂದರೆ ಯಾರು? ಎಂದು ನಾವು ಚಿಂತಿಸಹೊರಟರೆ ಸಾಮಾನ್ಯವಾಗಿ ನಮ್ಮ ಮನಸ್ಸು ಗೊಂದಲಮಯವಾಗುತ್ತದೆ. ಏಕೆಂದರೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ದೇವತೆಗಳ ಬಗ್ಗೆ ಹೇಳಲ್ಪಟ್ಟಿದೆ. ಒಂದೊಂದು ಪುರಾಣಕ್ಕೂ ಒಂದೊಂದು ದೇವರು. ಹಾಗೆಯೇ ಭಗವಂತನೆಡೆಗೆ ಹೋಗುವ ಹಾದಿಗಳೂ ನೂರಾರು. ಜಪ, ಧ್ಯಾನ, ಯೋಗ, ತ್ಯಾಗ, ಭಜನೆ, ದಾನ, ಧರ್ಮ ಹೀಗೆ ಹಲವು ಮಾರ್ಗಗಳಿವೆ. ಇವುಗಳೆಲ್ಲ ದಾರಿತೋರುವ ಬದಲು ನಮ್ಮ ಮನಸ್ಸಿನಲ್ಲಿ ಗೊಂದಲವನ್ನೇ ಸೃಷ್ಟಿಮಾಡಬಹುದು.

ಹಾಗಾದರೆ ಈ ವೈವಿಧ್ಯವೇಕೆ? ಈ ವೈವಿಧ್ಯಕ್ಕಾಗಿಯೇ ಸ್ವಾಮಿ ವಿವೇಕಾನಂದರು ಸನಾತನ ಧರ್ಮವನ್ನು Mother of religions(ಎಲ್ಲ ಧರ್ಮಗಳ ತಾಯಿ) ಎಂದರು. ಕುಟುಂಬದ ವಿವಿಧ ವ್ಯಕ್ತಿಗಳಿಗೆ ಅವರವರ ರುಚಿ, ಜೀರ್ಣಶಕ್ತಿ ಇತ್ಯಾದಿಗಳಿಗೆ ತಕ್ಕಂತೆ ಯೋಗ್ಯ ಅಡುಗೆ ಮಾಡಿಹಾಕುವ ಪ್ರೇಮಮಯಿ ಅಮ್ಮನಂತೆ ನಮ್ಮ ಸನಾತನಧರ್ಮ. ಹಿಂದೆ ಹೇಳಿದಂತೆ ಮನುಷ್ಯರು ಯಾರೂ ಒಬ್ಬರು ಮತ್ತೊಬ್ಬರಂತಿಲ್ಲ. ಅವರವರ ವಿವಿಧ ಭಾವನೆ, ಶಕ್ತಿ, ಆಸಕ್ತಿ, ದೇಶ-ಕಾಲಗಳಿಗೆ ಅನುಗುಣವಾದ ವಿವಿಧ ಭಾವಗಳ ದೇವರುಗಳನ್ನು ನಮ್ಮ ಶಾಸ್ತ್ರಗಳು ರೂಪಿಸಿಕೊಟ್ಟಿವೆ. ಮಾತೃಹೃದಯದ ನಮ್ಮ ಶಾಸ್ತ್ರಗಳು ಯಾರನ್ನೂ ಕಡೆಗಣಿಸಲಿಲ್ಲ. ಯಾರನ್ನೂ ಅಸಹಾಯಕರನ್ನಾಗಿ ಬಿಡಲಿಲ್ಲ. ದೇವರೆಡೆಗೆ ಯಾರು ಬೇಕಾದರೂ ಹೋಗಬಹುದು. ಒಂದು ತಲೆಯ, ಮೂರು ತಲೆಗಳ, ಹಲವು ತಲೆಗಳ ಹಲವು ಕೈಗಳ ದೇವರು ನಮ್ಮಲ್ಲಿದ್ದಾರೆ. ಸೌಮ್ಯ, ಉಗ್ರ, ಶಕ್ತಿಯುತ, ಶಾಂತ ಹೀಗೆ ವಿವಿಧ ಭಾವಗಳ ಭಗವಂತ ನಮ್ಮಲ್ಲಿದ್ದಾನೆ. ದೇಶ-ಕಾಲ-ಭಾವನೆಗಳಿಗೆ ಅನುಗುಣವಾಗಿ ಮಾನವಜನಾಂಗಕ್ಕೆ ಸೂಕ್ತ ದೇವರುಗಳನ್ನು ತೋರಿಸಿಕೊಟ್ಟು, ಎಲ್ಲರೂ ಆಧ್ಯಾತ್ಮಿಕವಾಗಿ ಸದಾ ಮುಂದುವರಿಯುವಂತೆ ಸಹಕರಿಸಿದೆ ನಮ್ಮ ಸನಾತನ ಧರ್ಮ. ನಮ್ಮ ಶಾಸ್ತ್ರಗಳ ಈ ವೈವಿಧ್ಯಗಳನ್ನು ನೋಡಿ ನಾವು ಮನಸ್ಥೈರ್ಯ ಕಳೆದುಕೊಳ್ಳುವ ಅಗತ್ಯವಿಲ್ಲ. ಅದರ ಬದಲು ಅವುಗಳ ಸದ್ಭಾವನೆಗಳನ್ನು ಕಂಡುಕೊಂಡು ನಮಗೆ ಯೋಗ್ಯವಾದ ದೇವರನ್ನು ಹಾಗೂ ಸಾಧನಾಮಾರ್ಗವನ್ನು ಆರಿಸಿಕೊಳ್ಳಬೇಕು. ಇದು ಶಾಸ್ತ್ರಗಳ ಸದುಪಯೋಗ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಮ್ಮ ಧರ್ಮವನ್ನು ಬಿಟ್ಟು ಇತರ ಧರ್ಮಗಳಲ್ಲಿ ಸಾಧನಾಪಥವು ಬಹಳ ತೊಡಕಿನದಾಗಿದೆ. ಒಂದೇ ಅಳತೆಯ ಕೋಟನ್ನು (ಅಂಗಿಯನ್ನು) ಎಲ್ಲರಿಗೂ ತೊಡಿಸುವ ಪ್ರಯತ್ನವದು. ಕೆಲವರಿಗೆ ಅದು ಸರಿಯಾದರೂ ಇನ್ನು ಕೆಲವರಿಗೆ ಅಳತೆ ಮೀರುತ್ತದೆ. ಆದರೆ ನಮ್ಮ ಸನಾತನಧರ್ಮದಲ್ಲಿ ಪ್ರತಿಯೊಬ್ಬನಿಗೂ ಯೋಗ್ಯವಾದ ಬೇರೆ ಬೇರೆ ಸಾಧನಾ ಮಾರ್ಗಗಳಿವೆ.

> **ನಾವು ಅಪರಿಚಿತ ದೇಶಕ್ಕೆ ಹೋದಾಗ ನಮಗೆ ಮಾರ್ಗದರ್ಶನ ನೀಡುವವರೊಬ್ಬರು ಇದ್ದರೆ ಒಳ್ಳೆಯದು. ಗುರು ಅಂಥ ಮಾರ್ಗದರ್ಶಕ.**
> — *ಸ್ವಾಮಿ ಯತೀಶ್ವರಾನಂದ.*

ಆದರೆ ತನಗೆ ಯೋಗ್ಯಮಾರ್ಗ ಯಾವುದು ಎಂದು ತಿಳಿಯದೇ ಸಾಧಕ ದಿಕ್ಕೆಡಬಹುದು. ನಿರ್ದಿಷ್ಟ ತಾಣವೊಂದಕ್ಕೆ ಹೋಗುವಾಗ ಎದುರಾಗುವ ಹಲವು ಕವಲು ದಾರಿಗಳಲ್ಲಿ ತಾನು ಹೋಗಬೇಕಾದ ಮಾರ್ಗ ಯಾವುದು ಎಂದು ತಿಳಿಯದೆ ದಿಕ್ಕೆಡುವ ಪಯಣಿಗನ ಸ್ಥಿತಿ ಸಾಧಕನದಾಗಬಹುದು. ಇಂತಹ ಸಂದರ್ಭದಲ್ಲಿ ಮಾರ್ಗವನ್ನು ಸ್ಪಷ್ಟವಾಗಿ ಅರಿತವನೊಬ್ಬ ಯೋಗ್ಯನಾದ ಮಾರ್ಗದರ್ಶಿಯಾಗಬಲ್ಲ. ಅಂತೆಯೇ ಸಿದ್ಧನಾದ ಮಹಾಪುರುಷನೊಬ್ಬನನ್ನು ಅಧ್ಯಾತ್ಮಜೀವನದಲ್ಲಿ ಸಾಧಕನು ಗುರುವಾಗಿ ಸ್ವೀಕರಿಸಲೇಬೇಕು. ಅಧ್ಯಾತ್ಮಜೀವನದ ಸ್ಥಿರತೆಗಾಗಿ ಗುರುವನ್ನು ಒಪ್ಪಲೇಬೇಕು.

ಸಾಧಕನಿಗೆ ಯೋಗ್ಯವಾದ ಇಷ್ಟದೇವತೆಯನ್ನು,

ಯೋಗ್ಯವಾದ ಸಾಧನಾಮಾರ್ಗವನ್ನು ಹಾಗೂ ಯೋಗ್ಯವಾದ ಮಂತ್ರವನ್ನು ಕಂಡುಕೊಡುತ್ತಾನೆ ಗುರು. ಹೀಗೆ ನಮ್ಮ ಇಷ್ಟ ದೇವರನ್ನು ಕಂಡುಕೊಟ್ಟು, ಜೀವನದುದ್ದಕ್ಕೂ ನಾವು ಆತನಿಗೆ ನಿಷ್ಠರಾಗಿರುವಂತೆ ಮಾಡುವ ಮಹಾಕಾರ್ಯ ಗುರುವಿನದು. "ಇವನೇ ನಿನ್ನ ಇಷ್ಟದೇವರು, ಇದೇ ನಿನ್ನ ಸಾಧನಾ ಪಥ" ಎಂದು ಗುರುವು ನಿರ್ದೇಶಿಸುವುದರಿಂದಾಗಿ ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ದೃಢತೆ ಹಾಗೂ ಸ್ಥಿರತೆ ಉಂಟಾಗುತ್ತದೆ. ತನ್ನ ಇಷ್ಟ ದೇವರಿಗೆ ನಿಷ್ಠನಾಗಿರುವುದೆಂದರೆ ಇತರ ದೇವತೆಗಳನ್ನು ದ್ವೇಷಿಸುವುದೆಂದು ಅರ್ಥವಲ್ಲ. ಎಲ್ಲ ದೇವರನ್ನು ಗೌರವಿಸಿದರೂ ತನ್ನ ಸರ್ವಸ್ವ ತನ್ನ ಇಷ್ಟದೇವರೆಂದು ತಿಳಿಯಬೇಕು. ಶ್ರೀರಾಮಕೃಷ್ಣರು ಇದಕ್ಕೊಂದು ಒಳ್ಳೆಯ ಉದಾಹರಣೆಯನ್ನು ಕೊಡುತ್ತಾರೆ. ಗೃಹಿಣಿಯೊಬ್ಬಳು ತನ್ನ ಅತ್ತೆ, ಮಾವ, ಮೈದುನ ಇವರನ್ನೆಲ್ಲ ಚೆನ್ನಾಗಿ ನೋಡಿಕೊಂಡರೂ ತನ್ನ ಪತಿಯನ್ನು ಮಾತ್ರ ವಿಶಿಷ್ಟ ರೀತಿಯಲ್ಲಿ ನೋಡಿಕೊಳ್ಳುತ್ತಾಳೆ! ಬೇರೆ ದೇವರುಗಳ ವೈಭವ ಅಥವಾ ಪ್ರಭಾವದಿಂದಾಗಿ ಸಾಧಕನಿಗೆ ತನ್ನ ಇಷ್ಟ ದೇವತೆಯ ವಿಷಯದಲ್ಲಿ ನಿಷ್ಠೆ ಕುಂಠಿತವಾಗಬಾರದು.

ಗುರುವಿನ ಕೃಪೆಯಿಂದಲೇ ಅಧ್ಯಾತ್ಮಸಾಧನೆ ಮುಂದುವರಿಯುತ್ತದೆ. ನಮ್ಮ ಜೀವನದಲ್ಲಿ ಶಾಲೆಯ ಕಲಿಯುವಿಕೆಯಲ್ಲಿ ನಾವು ಅನುತ್ತೀರ್ಣರಾಗಬಹುದು. ಆದರೆ ಅಧ್ಯಾತ್ಮ ಜೀವನದಲ್ಲಿ "ನಪಾಸ್" ಎಂಬುದೇ ಇಲ್ಲ. ಗುರುವಿನಿಂದ ದೀಕ್ಷೆ ಪಡೆದವರು ನಿತ್ಯ ಜಪಧ್ಯಾನ ಮಾಡಬೇಕಾಗುತ್ತದೆ. ಇದಕ್ಕೆ ನಮ್ಮ ಇಚ್ಛಾಶಕ್ತಿ ಸಾಕಾಗಲಾರದು. ಏಕೆಂದರೆ ನಮ್ಮ ನಿತ್ಯದ ಕೆಲಸಕಾರ್ಯಗಳ ಹಾಗೂ ನಮ್ಮ ಮನಸ್ಸಿನ ವಿವಿಧ ಭಾವಗಳ ಸೆಳೆತದಿಂದ ನಾವು ಆಗಾಗ ನಮ್ಮ ಜಪಧ್ಯಾನಾದಿಗಳನ್ನು ತಪ್ಪಿಸಬಹುದು. ಅಂತಹ ಕಾಲದಲ್ಲಿ ಗುರುವು ತನ್ನ ಇಚ್ಛಾಶಕ್ತಿಯನ್ನೂ ನಮ್ಮೊಡನೆ ಕೂಡಿಸುತ್ತಾನೆ. ಹಾಗೂ ಜಪಧ್ಯಾನಗಳನ್ನೂ ಕಡ್ಡಾಯವಾಗಿ ಮಾಡಿಸುತ್ತಾನೆ. ಮಗುವು ತನಗೆ ಮನಸ್ಸಿಲ್ಲದಿದ್ದರೂ ಸಹ ನಿಯಮಿತವಾಗಿ ಮಗ್ಗಿ ಹೇಳುವಂತೆ ನಮ್ಮ ಜಪಧ್ಯಾನಗಳೆಲ್ಲ ಆಗ ನಿಯಮಬದ್ಧವಾಗುತ್ತವೆ. ಸಾಮಾನ್ಯವಾಗಿ ಯಾವುದೇ ಕ್ಷೇತ್ರದಲ್ಲಾದರೂ ನಾವು ಪ್ರಗತಿ ಸಾಧಿಸಬೇಕಾದರೆ ಬೇರೆಯವರಿಂದ ಯಾವುದೊ ಒಂದು ತೆರನಾದ ಬಲವಂತ ಬೇಕಲ್ಲವೇ! ಇಲ್ಲಿ ಅಧ್ಯಾತ್ಮಜೀವನದಲ್ಲಿ ಗುರುವಿನ ಇಚ್ಛಾಶಕ್ತಿ ನಮ್ಮ ಇಚ್ಛಾಶಕ್ತಿಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಆದರೆ ಅಧ್ಯಾತ್ಮಜೀವನದಲ್ಲಿ ತಪ್ಪಿದವರಿಗೆ ಶಿಕ್ಷೆಯಿರುವುದಿಲ್ಲ. ನಾವು ತಪ್ಪಿದಾಗ ನಾವೇ ತಿಳಿದುಕೊಳ್ಳುತ್ತೇವೆ. ನಮ್ಮ ತಪ್ಪನ್ನು ಸರಿಪಡಿಸಿಕೊಳ್ಳಬಹುದು.

ಅಧ್ಯಾತ್ಮಜೀವನವೆಂದರೆ ಸರ್ವತೋಮುಖ ಬೆಳವಣಿಗೆ. ಈ ಪ್ರಗತಿಗೆ ಕೇವಲ ನಮ್ಮ ಪ್ರಯತ್ನವೊಂದೇ ಸಾಲದು. ಇನ್ನೊಂದು ಶಕ್ತಿ ಬೇಕು. ಅದೇ ಭಗವಂತನ ಶಕ್ತಿ. ಅದನ್ನು ಗುರುವು ನಮಗೆ ದೀಕ್ಷೆಯ ಮೂಲಕ ನೀಡುತ್ತಾನೆ. ಆದ್ದರಿಂದ ನಾವು ಗುರುವಿಗೆ ವಿಶೇಷ ಪೂಜೆಯನ್ನು ಸಲ್ಲಿಸುತ್ತೇವೆ. ನಮ್ಮ ಅಧ್ಯಾತ್ಮಗುರುವು ಹೇಳಿದುದನ್ನು ನೂರಕ್ಕೆ ನೂರರಷ್ಟು ಪಾಲಿಸಬೇಕು. ಸಾಧನೆಯಲ್ಲಿ ನಮಗೆ ಪ್ರಗತಿ ಬೇಕಿದ್ದರೆ ಪೂರ್ಣ ಶರಣಾಗತಿ ಅತ್ಯಗತ್ಯ. 'ನಾನು' ಅಥವಾ 'ಅಹಂ' ಅಳಿಯಲೇಬೇಕು. 'ನಾನು' ಹೋದಷ್ಟೂ ಅಲ್ಲಿ 'ಭಗವಂತ' ತುಂಬಿಕೊಳ್ಳುತ್ತಾನೆ. ಒಂದೆಡೆ ಖಾಲಿಯಾಗುವ ಮತ್ತೊಂದೆಡೆ ಪೂರ್ಣವಾಗುವ ಕ್ರಿಯೆಯಿದು. 'ನಾನು' ಹೋದರೆ ಮುಂದೆ ನನ್ನ ಜೀವನದ ಗತಿಯೇನು? ಎಂದು ಹೆದರುವವರಿದ್ದಾರೆ ನಮ್ಮಲ್ಲಿ. ಆದರೆ ಈ ಪೂರ್ಣತೆಯ ದಾರಿಯೇ 'ನಾನು' ಅಳಿಯುವುದು. ಈ ಕ್ಷುಲ್ಲಕ 'ನಾನು' ಒಳಗಿರುವತನಕ ಒಪ್ಪದೇ ಇದ್ದ ಹಲವು ಸದ್ಭಾವನೆಗಳನ್ನು ಭಗವಂತ ತನ್ನೊಳಗೆ ಬಂದಮೇಲೆ ಸಾಧಕ ಒಪ್ಪಿಕೊಳ್ಳುತ್ತಾನೆ. ಕೊನೆಗೆ ಆ 'ನಾನು' ಸಂಪೂರ್ಣ ಹೋದಾಗ ಇವನೇ ಶಿವನಾಗುತ್ತಾನೆ.

ನಾವೆಲ್ಲ ನಮ್ಮ ಇಚ್ಛಾನುಸಾರ ಕೆಲಸಮಾಡುತ್ತೇವೆ ಎನ್ನುವುದು ಸರಿಯಲ್ಲ. ನಮ್ಮ ಕೆಲಸಗಳ ಮೇಲೆ ಎಷ್ಟೋ ವಿಷಯಗಳ ಒತ್ತಡದ ಪರಿಣಾಮಗಳಿರುತ್ತವೆ. ನಮ್ಮೊಳಗಿನ ಸಂಸ್ಕಾರ, ಬಾಹ್ಯಶಕ್ತಿಗಳು ಇತ್ಯಾದಿಗಳ ಪರಿಣಾಮದಿಂದ ಕೆಲಸ ಮಾಡುತ್ತೇವೆ. ಇಲ್ಲಿ 'ನಾನು' ಏನೂ ಅಲ್ಲ. ಹೀಗೆ 'ಅಹಂ' ಹೋದಾಗ ಭಗವಂತನೇ ಸ್ವತಃ ಎಲ್ಲವನ್ನೂ ಕೈಗೊಳ್ಳುತ್ತಾನೆ. ವಿಶ್ವದ ಕಾರ್ಯಕಲಾಪಗಳೆಲ್ಲ ಭಗವಂತನಿಂದಲೇ ನಡೆಯುತ್ತವೆಂದು ತಿಳಿಯುತ್ತಾನೆ. ನನ್ನ ಕಾಲಮೇಲೆ ನಾನು ನಿಂತಿರುತ್ತೇನೆ, ನಾನೇ ಸಾಧನೆಯನ್ನು ಸಾಧಿಸುತ್ತೇನೆ ಎಂದರೆ ಅದು ಅಸಾಧ್ಯವಾದ ಮಾತು. ದಿನಕ್ಕೆ ಎರಡು ಬಾರಿ ಧ್ಯಾನಮಾಡಲಿಕ್ಕೂ ನಮಗೆ ಆಗಾಗ ಕಷ್ಟವಾಗಬಹುದು. ಆಗ ಗುರುವಿನ ಶಕ್ತಿ ಬರುತ್ತದೆ ಹಾಗೂ ನಮ್ಮನ್ನು ಸಾಧನೆ ಮಾಡಲು ಬಲಾತ್ಕರಿಸುತ್ತದೆ.

**ಆಂತರಿಕ ಗುರು ಜಾಗೃತಗೊಳ್ಳುವತನಕ ಹೊರಗಿನ ಉಪದೇಶಗಳೆಲ್ಲವೂ ವ್ಯರ್ಥ.** —*ಸ್ವಾಮಿ ವಿವೇಕಾನಂದ*

ದೀಕ್ಷೆ ಪಡೆದು ಇಷ್ಟೊಂದು ಸಾಧನೆ ಮಾಡಿದರೂ ಭಗವಂತ ಪ್ರತ್ಯಕ್ಷನಾಗಲಿಲ್ಲ, ಏನೂ ವಿಶೇಷ ಲಾಭವಾಗಲಿಲ್ಲ, ದರ್ಶನಗಳು ಲಭಿಸಲಿಲ್ಲ ಎಂದು ಕುಂದುವವರಿದ್ದಾರೆ, ಅಧ್ಯಾತ್ಮ ಜೀವನದ ಬಗ್ಗೆಯೇ ಸಂಶಯ ಹೊಂದುವವರಿದ್ದಾರೆ. ಆದರೆ ನೀವೇ ಯೋಚಿಸಿನೋಡಿದರೆ ನಿಮ್ಮಲ್ಲಾದ ಬದಲಾವಣೆ ತಿಳಿಯುತ್ತದೆ. ಹಿಂದೆ ಸಣ್ಣಪುಟ್ಟ ವಿಷಯಗಳಿಗೆ ಆತಂಕಗಳಿಗೆ ನೀವು ಅಲ್ಲೋಲಕಲ್ಲೋಲರಾಗಿಬಿಟ್ಟಿರಬಹುದು. ಈಗ ಯೋಚಿಸಿ ನೋಡಿದರೆ ನಿಮ್ಮಲ್ಲಿ ಎಂತಹ ಬದಲಾವಣೆಯಾಗಿದೆ! ಅಂತಹ ಘಟನೆಗಳು ಈಗ ನಿಮ್ಮ ಮನಸ್ಸಿನ ಮೇಲೆ ಯಾವುದೇ ಪರಿಣಾಮ ಬೀರಲಾರವು. ಹಿಂದೆ ಸಣ್ಣ ಅಲೆಗಳೇ ನಿಮ್ಮ ಮನಸ್ಸಿನ ದೋಣಿಯನ್ನು ಮಗುಚಿಬಿಡುತ್ತಿದ್ದವು. ಆದರೆ ಈಗ ನೀವು ಹಡಗು ಆಗಿದ್ದೀರಿ, ಸುದೃಢರಾಗಿದ್ದೀರಿ. ದೊಡ್ಡ ದೊಡ್ಡ ಅಲೆಗಳೂ ನಿಮ್ಮನ್ನು ಅಲ್ಲಾಡಿಸಲಾರವು. ನಿಮ್ಮಲ್ಲಿ ದೈವತ್ವ ಅರಳುತ್ತಿದೆ. ಮುಂದೆ ಭಗವಂತನೇ ನಿಮ್ಮಲ್ಲಿ

ಅವತರಿಸುತ್ತಾನೆ. ಶ್ರೀರಾಮಕೃಷ್ಣರು ಹೇಳುತ್ತಿದ್ದರು : "ನಾನು ಭಗವಂತನಿಗೆ ಸೇರಿ ದವನು. ನನ್ನನ್ನು ದಂಡಿಸಲು ಯಾರಿಗೆ ಸಾಧ್ಯ?" ಎಂದು. ಅಂತಹ ಧೈರ್ಯ ನಮ್ಮಲ್ಲಿ ಬರಬೇಕು. ಇದಕ್ಕೆಲ್ಲ ಕೇವಲ ಗುರುವಿನಿಂದ ದೀಕ್ಷೆ ತೆಗೆದುಕೊಂಡರೆ ಸಾಲದು. ಪ್ರಯತ್ನ ಪೂರ್ವಕವಾಗಿ ಸಾಧನೆ ಮಾಡಬೇಕು. ಆಗ ನಮ್ಮಲ್ಲಿರುವ ಅಶಾಂತಿ ಕ್ರಮೇಣ ಖಾಲಿಯಾಗಿ ಆ ಸ್ಥಾನದಲ್ಲಿ ಭಗವಂತನೇ ತುಂಬಿಕೊಳ್ಳುತ್ತಾನೆ.

**ಒಂದು ಆತ್ಮವು ಮತ್ತೊಂದು ಆತ್ಮನಿಂದ ಮಾತ್ರ ಪ್ರೇರೇಪಣೆಯನ್ನು ಪಡೆಯಬಹುದು. ಈ ಪ್ರೇರೇಪಣೆ ಯಾರಿಂದ ಬರುವುದೊ ಅವನೇ ಗುರು.**

*—ಸ್ವಾಮಿ ವಿವೇಕಾನಂದ.*

ನಾನು ಚೆನ್ನೈನ ನಮ್ಮ ಮಠದಲ್ಲಿದ್ದಾಗ ನಮ್ಮ ಹಿರಿಯ ಸ್ವಾಮಿಗಳಲ್ಲೊಬ್ಬರಾಗಿದ್ದ ಪೂಜ್ಯ ಸ್ವಾಮಿ ಯತೀಶ್ವರಾನಂದಜೀ ಅವರು ಒಂದು ಇಂದ್ರಜಾಲವನ್ನು ನಾನು ನೋಡಿಕೊಂಡು ಬರುವಂತೆ ಹಾಗೂ ಅದನ್ನು ಅವರಿಗೆ ವಿವರಿಸುವಂತೆ ಒತ್ತಾಯಿಸಿದರು. ಆಶ್ರಮವಾಸಿಯಾದ ನಾನು ಇಂತಹ ಆಟಗಳಿಗೆ ಹೋಗ ಬಾರದಾಗಿದ್ದರೂ ಹಿರಿಯ ಸ್ವಾಮೀಜಿಯವರ ಆಜ್ಞೆಯಂತೆ ಅದನ್ನು ನೋಡಿ ಬಂದು ಅವರಿಗೆ ವಿವರಿಸಿದೆ. ಈ ಯಕ್ಷಿಣಿ ಆಟವನ್ನು ನೋಡಿಕೊಂಡು ಬರಲು ಅವರು ಒತ್ತಾಯಿಸಿದ ಕಾರಣ ಆಮೇಲೆ ನನಗೆ ತಿಳಿಯಿತು. ಹೊರಗೆಲ್ಲ ಅನೇಕ ತರಹದ ಪವಾಡಗಳಿವೆ ಎಂದು ತನ್ನ ಇಷ್ಟದಲ್ಲಿ ಅಥವಾ ಗುರುವಿನಲ್ಲಿ ಸಾಧಕನಿಗೆ ಅತೃಪ್ತಿ ಉಂಟಾಗಬಾರದು. ಹಾಗೂ ಈ ಪವಾಡಗಳು ಆಧ್ಯಾತ್ಮಿಕತೆಯ ಚಿಹ್ನೆಯಲ್ಲ, ಕೇವಲ ಕೈಚಳಕ ಎಂದು ತಿಳಿದು ಅವುಗಳಿಗೆ ಮಾರುಹೋಗಬಾರದು ಎಂದು ನನಗೆ ಪಾಠ ಕಲಿಸಲು ಅವರು ನನ್ನನ್ನು ಇಂದ್ರಜಾಲವನ್ನು ನೋಡಲು ಕಳಿಸಿದ್ದರಂತೆ! ಈ ಪವಾಡಗಳ ಆಕರ್ಷಣೆ ಅಧ್ಯಾತ್ಮ ಪ್ರಗತಿಗೆ ಅಡ್ಡಿಯಾಗುವುದು. ಇವುಗಳ ಆಕರ್ಷಣೆ ಅಧ್ಯಾತ್ಮಜೀವನದಲ್ಲಿ ಚಂಚಲತೆ ಹಾಗೂ ಅಸ್ಥಿರತೆಯನ್ನು ಉಂಟುಮಾಡುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೂ ಇಷ್ಟವನ್ನು ಹಾಗೂ ನಿಷ್ಠೆಯನ್ನು ಬದಲಿಸಬಾರದು. ಹಾಗೂ ಗುರುವು ಹೇಳಿಕೊಟ್ಟ ಮಾರ್ಗದಲ್ಲಿ ಏಕನಿಷ್ಠೆಯಿಂದ ಸಾಧನೆ ಮಾಡಬೇಕು.

ಶ್ರೀಕೃಷ್ಣ ಬಹಳ ಹಿಂದೆಯೇ ಈ ಪ್ರಪಂಚವನ್ನು **ದುಃಖಾಲಯಂ ಅಶಾಶ್ವತಂ** ಎಂದಿದ್ದಾನೆ. ಇಂತಹ ದುಃಖಾಲಯವಾದ ಅಶಾಶ್ವತವಾದ ಈ ಪ್ರಪಂಚದಲ್ಲಿ ಜೀವನ ನಡೆಸಲು ಒಂದು ಭರವಸೆ ಬೇಕು, ಶ್ರದ್ಧೆ ಇರಬೇಕು. ನಮ್ಮಲ್ಲಿ ದುಃಖ ಅಥವಾ ಕಷ್ಟವನ್ನು ಸಹಿಸುವ ಶಕ್ತಿ ಇಲ್ಲದಿದ್ದಾಗ ನಮಗೆ ಗುರುವಿನ ಅಥವಾ ಭಗವಂತನ ಆಧಾರ ಬೇಕಾಗುವುದು. ನಾವು ಕಷ್ಟದಲ್ಲಿ ಇರುವಾಗಲೆಲ್ಲ "ಭಗವಂತ ನಮ್ಮನ್ನು ಕೈಬಿಡುವುದಿಲ್ಲ" ಎಂಬ ಭರವಸೆ ನಮ್ಮಲ್ಲಿ ಮೂಡುವುದೇ ನಮ್ಮ ಅಧ್ಯಾತ್ಮಜೀವನದ ಪ್ರಗತಿಯ ಕುರುಹು. ಸಾಧನೆಯಲ್ಲಿ ಪ್ರಗತಿ ಸಾಧಿಸಿದಾಗ ಕಷ್ಟಗಳನ್ನು ಎದುರಿಸಲು ನನ್ನೊಡನೆ ಭಗವಂತನೂ ಇದ್ದಾನೆ ಎನ್ನುವ ಭರವಸೆ ಮೂಡುತ್ತದೆ.

ನಮ್ಮಲ್ಲಿ (ಸಾಧಕರಲ್ಲಿ) ಪ್ರತಿಯೊಬ್ಬರಿಗೂ ಭಗವಂತನನ್ನು ನೋಡಬೇಕೆನ್ನುವ ಇಚ್ಛೆ ಪ್ರಬಲವಾಗಿದೆ. ಅದಕ್ಕಾಗಿ ಭಗವಂತನನ್ನು ನೆನೆಯಬೇಕು, ಸಾಧನೆ ಮಾಡಬೇಕು ಎಂಬುದೂ ಸಹ ಎಲ್ಲರಿಗೂ ಗೊತ್ತು. ಆದರೂ ಪ್ರಾಪಂಚಿಕ ಕೆಲಸ ಕಾರ್ಯಗಳ ಒತ್ತಡದಿಂದಾಗಿ ನಾವು ಆಗಾಗ ಅವನನ್ನು ಮರೆಯುವುದು, ಆಗಾಗ ಧ್ಯಾನ ಜಪಾದಿಗಳನ್ನು ತಪ್ಪಿಸುವುದೂ ಸರ್ವೇಸಾಮಾನ್ಯ. ಹೀಗಾಗಲು ಕಾರಣವೇನು? ನಮ್ಮೆಲ್ಲರ ಮನಸ್ಸಿನೊಳಗೆ ಎರಡು ರೀತಿಯ ಭಾವನೆಗಳಿವೆ. ಸಾಧನೆ ಮಾಡು ಜಪ ಮಾಡು ಎನ್ನುವ ಸಾಧಕಭಾವನೆ ಒಂದಾದರೆ ಅದಕ್ಕೆ ವಿರೋಧವಾದ ಮತ್ತೊಂದು ಭಾವನೆಯೂ ನಮ್ಮಲ್ಲಿ ಸ್ಫುರಣವಾಗುತ್ತದೆ. ಅದು ಕ್ಷಣ ಕ್ಷಣಕ್ಕೂ "ಧ್ಯಾನ ಸಾಧನೆ ಈಗ ಬೇಡ, ಆಮೇಲೆ ನೋಡುವ" ಎನ್ನುತ್ತಾ ಅದನ್ನು ಮುಂದೂಡುವ ವಿರೋಧಭಾವನೆ(negative feeling) ಆಗಿರುತ್ತದೆ. ಎಷ್ಟೋ ವೇಳೆ ನಮ್ಮ ದುರ್ಬಲ ಮನಸ್ಸು ಈ ವಿರೋಧಭಾವನೆಯನ್ನೇ ಸಕಾರಣವಾಗಿ ಒಪ್ಪಿಕೊಂಡು ಮೋಸಹೋಗುವುದು. ಹೀಗೆ ಒಮ್ಮೆ ತಪ್ಪಿಹೋದ ಧ್ಯಾನದ ಅಭ್ಯಾಸ ಮತ್ತೆ ಮತ್ತೆ ಮರುಕಳಿಸುತ್ತಾ ಬಂದು ಕೊನೆಗೆ ಸಾಧನಾನಿಷ್ಠೆ ಕುಂಠಿತಗೊಳ್ಳುವುದು. ಈ ವಿರೋಧ ಭಾವನೆಗಳನ್ನು ಗೆಲ್ಲಲು ನಮ್ಮ ಮನೋಬಲ ಸಾಕಾಗಲಾರದು. ಅದಕ್ಕೆ ಗುರುವಿನ ಶಕ್ತಿ ನಮಗೊಂದು ಶ್ರೀರಕ್ಷೆಯಾಗುತ್ತದೆ. ನಮ್ಮ ಗುರುಶ್ರದ್ಧೆಯೆ ಆತ್ಮಬಲವಾಗಿ ಅಂತರ್ಯದಲ್ಲಿ ಕೆಲಸ ಮಾಡುತ್ತ ಸಾಧನೆಯ ಪಥದಲ್ಲಿ ನಮ್ಮನ್ನು ಮುನ್ನಡೆಸುತ್ತದೆ. ಈ ಶ್ರದ್ಧೆಯೆ ಯಶಸ್ಸಿನ ಮೂಲ ಶಕ್ತಿ. ✡

**ಚೀನಾದ ಮಹಾದಾರ್ಶನಿಕ ಲಾಓ ಟ್ಸುನ ಶಿಷ್ಯ ಒಂದು ಕತೆಯನ್ನು ಹೇಳುತ್ತಿದ್ದ. ಯುವಕನೊಬ್ಬ ದರೋಡೆಕಾರರ ಗುಂಪನ್ನು ಸೇರಿದ. ಗುಂಪಿನ ನಾಯಕನಾದ ಚೀನನ್ನು "ಕದಿಯುವುದರ ಮೂಲಕ ಟಾಓ (ಸರಿಮಾರ್ಗ) ಸಿಗುವುದೆ?" ಎಂದು ಆ ಯುವಕ ಕೇಳಿದಾಗ ಅವನೆಂದ: "ಯಾವುದರಲ್ಲಿ ಟಾಓ (ಒಂದು ನಿಯಮ ಅಥವಾ ಸರಿಮಾರ್ಗ) ಇಲ್ಲ ಹೇಳು? ಕಳ್ಳತನದಲ್ಲೂ ಸಂಪತ್ತು ಎಲ್ಲಿದೆ ಎಂದು ತಿಳಿಯುವ <u>ಬುದ್ಧಿವಂತಿಕೆ</u> ಬೇಕು; ನಾಯಕನಾಗಿ ಮುಂದೆ ಹೋಗುವ ಧೈರ್ಯ ಬೇಕು; ಹೊರಗೆ ಬರುವಾಗ ಎಲ್ಲರ ನಂತರ ಕೊನೆಯಲ್ಲಿ ಹೊರಬರುವ <u>ಸಾಹಸ</u> ಬೇಕು; ಕಳ್ಳತನದಲ್ಲಿ ಯಶಸ್ಸನ್ನು ಪಡೆಯುವ ಬಗೆ ಹೇಗೆಂಬುದನ್ನು ತಿಳಿಯುವ <u>ಅಂತರ್ದೃಷ್ಟಿ</u> ಬೇಕು; ಕದ್ದದ್ದನ್ನು ಸರಿಯಾಗಿ ಹಂಚಿಕೊಳ್ಳುವ <u>ನ್ಯಾಯ</u> ಬೇಕು. ಈ ಐದು ಗುಣಗಳನ್ನು ಹೊಂದಿರದ ಯಶಸ್ವಿ ಕಳ್ಳನು ಎಂದೂ ಇರಲಿಲ್ಲ."ಜೀವನದ ಪ್ರತಿಯೊಂದು ಕ್ರಿಯೆಯಲ್ಲಿಯೂ, ಕಳ್ಳತನದಲ್ಲಿಯೂ ಕೂಡ ನಾವು ಕಲಿಯಬೇಕಾದ ನೀತಿನಿಯಮಗಳಿವೆ.**

**(ಸ್ವಾಮಿ ಯತೀಶ್ವರಾನಂದರ ಧ್ಯಾನ ಮತ್ತು ಆಧ್ಯಾತ್ಮಿಕ ಜೀವನದಿಂದ)**